5 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಶಿವಮೊಗ್ಗ
(ಪೀಠಾಸೀನ, ಸಾಗರ)

ಎಸ್.ಸಿ. ಸಂಃ10038/2021

ಪಿಡಬ್ಲೂ 05
ಸಿಡಬ್ಲೂ 06

ಸಾಕ್ಷಿ ಹೆಸರು - ಪ್ರಮೋದಿನಿ
ಗಂಡನ ಹೆಸರು - ಸತೀಶ
ವಯಸ್ಸು - 28 ವರ್ಷ
ಉದ್ಯೋಗ - ಗೃಹಿಣಿ
ವಿಳಾಸಃ - ಸಾರೇಕೊಪ್ಪ, ಸೊರಬ ತಾಲ್ಲೂಕು.

ಪ್ರಮಾಣ ವಚನ ಭೋದಿಸಿದ ದಿನಾಂಕಃ 25-07-2022.

ಮುಖ್ಯ ವಿಚಾರಣೆಃ ಮಾನ್ಯ ಸರಕಾರಿ ಅಭಿಯೋಜಕರವರಿಂದಃ

ಪ್ರಾ.ಸಾ-1 ನನ್ನ ಮೈದುನ. ಚಾಸಾ-2 ನನ್ನ ಗಂಡ. ಚಾಸಾ-7 ನನ್ನ ತಂದೆ. ಚಾಸಾ-8 ನನ್ನ ಮಾವ , ಚಾಸಾ-9 ನನ್ನ ಅತ್ತೆ , ಪ್ರಾ.ಸಾ- 2 , ಪ್ರಾ,ಸಾ-4 , ಚಾಸಾ10 ಮತ್ತು ಚಾಸಾ11 ರವರ ಪರಿಚಯ ಇದೆ. ಆರೋಪಿತರ ಪರಿಚಯ ಇದೆ. ನಾನು ಸಾರೇಕೊಪ್ಪ ಗ್ರಾಮದಲ್ಲಿ ವಾಸ ಇದ್ದೇನೆ. ಸಾರೇಕೊಪ್ಪ ಗ್ರಾಮದಲ್ಲಿ ಖಾನೆ ಷುಮಾರಿ ನಂಬರ್ ನಲ್ಲಿ 1 ಎಕರೆ ಜಾಗದಲ್ಲಿ ಬಾಳೆ ಮತ್ತು ಅಡಿಕೆ ಗಿಡಗಳನ್ನು ನೆಟ್ಟು ತೋಟ ಮಾಡಿರುತ್ತೇವೆ. ಸದರಿ ತೋಟಕ್ಕೆ ಮೊದಲು ಬೇಲಿ ಇರಲಿಲ್ಲ, ದನ ಕರುಗಳು ಬಂದು ತೋಟವನ್ನು ಹಾಳು ಮಾಡುತ್ತಿದ್ದವು. ಸದರಿ ತೋಟಕ್ಕೆ ತಂತಿ ಬೇಲಿ ಮಾಡಲು ರೆಡಿ ಮಾಡಿಕೊಂಡಿದ್ದೆವು. ನಮ್ಮ ತೋಟಕ್ಕೆ 1 ನೇ ಆರೋಪಿಯ ದನ ಕರುಗಳು ಬಂದು ತೋಟದಲ್ಲಿದ್ದ ಗಿಡಗಳನ್ನು ತಿಂದು ಹಾಳು ಮಾಡುತ್ತಿದ್ದವು . ಆ ಬಗ್ಗೆ ನಮ್ಮ ಮನೆಯವರು 1 ನೇ ಆರೋಪಿಗೆ ನಮ್ಮ ತೋಟಕ್ಕೆ ದನಗಳನ್ನು ಬಿಡಬೇಡಿ ಎಂದು ಹೇಳಿರುತ್ತಾರೆ. ಆದರೆ 1 ನೇ ಆರೋಪಿಯು ದನಗಳನ್ನು ನಮ್ಮ ತೋಟಕ್ಕೆ ಬಿಟ್ಟಿರುತ್ತಾರೆ.

ದಿನಾಂಕಃ09-06-2019 ರಂದು ಪ್ರಾ.ಸಾ-1 ಮತ್ತು ಚಾಸಾ2 ರವರು ಜೆ.ಸಿ.ಬಿ ತೆಗೆದುಕೊಂಡು ಕೆಲಸದ ನಿಮಿತ್ತ ಬೇರೆ ಊರಿಗೆ ಹೋಗಿದ್ದರು. ಆಗ 1 ನೇ ಆರೋಪಿ ಮತ್ತು ಪರಸಪ್ಪ ನಮ್ಮ ತೋಟಕ್ಕೆ ಬೆಂಕಿ ಹಾಕಿದ್ದರು. ಇದರಿಂದ ನಮ್ಮ ತೋಟದಲ್ಲಿದ್ದ 30-40 ಅಡಿಕೆ ಗಿಡಗಳು ಮತ್ತು

ಬಾಳೆ ಗಿಡಗಳು ಸುಟ್ಟು ಹೋಗಿದ್ದರು. ನಂತರ ಪ್ರಾ.ಸಾ-1 ಮತ್ತು ಚಾಸಾ-2 ರವರು ಸಂಜೆ 7 ಗಂಟೆ ಸುಮಾರಿಗೆ ಮನೆಗೆ ಬಂದಿದ್ದು ಆಗ 1 ನೇ ಆರೋಪಿಯು ನಮ್ಮ ತೋಟಕ್ಕೆ ಬೆಂಕಿ ಹಚ್ಚಿದ ವಿಷಯ ಗೊತ್ತಾಗಿ 1 ಮತ್ತು 2 ನೇ ಆರೋಪಿಯನ್ನು ಕೇಳಲು ಹೋಗಿರುತ್ತಾರೆ. ಪ್ರಾ.ಸಾ-1 ಮತ್ತು ಚಾಸಾ-2 ರವರು ಹೋದ ಸ್ವಲ್ಪ ಹೊತ್ತಿನಲ್ಲಿ ಹುಣಸೇಕೊಪ್ಪದ ಮಂಜುನಾಥ ರವರ ಮನೆಯ ಕಡೆಯಿಂದ ಗಲಾಟೆ ಶಬ್ದ ಕೇಳಿರುತ್ತದೆ. ಆಗ ಸಾಯಂಕಾಲ 7-30 ಗಂಟೆ ಆಗಿರುತ್ತದೆ. ಗಲಾಟೆ ಶಬ್ದ ಕೇಳಿ ನಾನು , ಚಾಸಾ-7 ರಿಂದ ಚಾಸಾ-9 ರವರು ಹುಣಸೆಕೊಪ್ಪದ ಮಂಜುನಾಥರವರ ಮನೆಯ ಹತ್ತಿರ ಹೋಗಿರುತ್ತೇವೆ. ಆ ಸಮಯದಲ್ಲಿ ಆರೋಪಿತರು ಕಲ್ಲುಗಳು ಮತ್ತು ದೊಣ್ಣೆಯನ್ನು ತೆಗೆದುಕೊಂಡು ಪ್ರಾ.ಸಾ-1 ಮತ್ತು ಚಾಸಾ-2 ರವರ ಜೊತೆಗೆ ಜಗಳಕ್ಕೆ ಬಂದಿದ್ದರು. ಆರೋಪಿತರು ನಮ್ಮ ಕುಟುಂಬದವರ ತಂಟೆಗೆ ಬಂದರೆ ನಿಮ್ಮನ್ನು ಉಳಿಸುವುದಿಲ್ಲ ಎಂದು ಹೇಳಿ 3 ನೇ ಆರೋಪಿ ಕಲ್ಲಿನಿಂದ ಚಾಸಾ-2 ರವರ ತಲೆಗೆ ಹೊಡೆದನು. ಆಗ ಚಾಸಾ-2 ರವರು ಪ್ರಜ್ಞೆ ತಪ್ಪಿ ಕೆಳಗೆ ಬಿದ್ದಿರುತ್ತಾರೆ. ಉಳಿದ ಆರೋಪಿತರು ಚಾಸಾ-2 ರವರನ್ನು ಕಾಲಿನಿಂದ ಒದ್ದು ತುಳಿದಿರುತ್ತಾರೆ. ಆರೋಪಿತರು ರೀಪರ್ ನಿಂದ ಪ್ರಾ.ಸಾ-1 ರವರ ತಲೆಗೆ ಹೊಡೆದಿರುತ್ತಾರೆ. 7 ನೇ ಆರೋಪಿ ಕಲ್ಲಿನಿಂದ ಪ್ರಾಸಾ-1 ರವರ ಹಣೆಗೆ ಹೊಡೆದಿರುತ್ತಾನೆ.

ಆರೋಪಿತರು ಹಲ್ಲೆ ಮಾಡಿದ್ದರಿಂದ ಚಾಸಾ-2 ರವರ ತಲೆಗೆ ರಕ್ತ ಬಂದಿದ್ದು ತಲೆಗೆ ಮತ್ತು ಮೈಕೈಗೆ ಪೆಟ್ಟಾಗಿತ್ತು. ಪ್ರಾ.ಸಾ-1 ರವರಿಗೆ ತಲೆಯ ಹಿಂಭಾಗಕ್ಕೆ ಮತ್ತು ಹಣೆಗೆ ಪೆಟ್ಟಾಗಿತ್ತು. ನಂತರ ಪ್ರಾ.ಸಾ-4 , ಚಾಸಾ-10 , ಪ್ರಾ.ಸಾ-2 ರವರು ಬಂದು ಗಲಾಟೆ ಬಿಡಿಸಿರುತ್ತಾರೆ. ಆಗ ಆರೋಪಿತರು ನಮ್ಮ ತಂಟೆಗೆ ಬಂದರೆ ನಿಮ್ಮನ್ನು ಜೀವ ಸಹಿತ ಉಳಿಸುವುದಿಲ್ಲ ಎಂದು ಚಾಸಾ-2 ಮತ್ತು ಪ್ರಾ.ಸಾ-1 ರವರಿಗೆ ಬೆದರಿಕೆ ಹಾಕಿರುತ್ತಾರೆ. ದೊಣ್ಣೆ ಮತ್ತು ಕಲ್ಲುಗಳು ಅಲ್ಲೇ ರಸ್ತೆಯಲ್ಲಿ ಬಿದ್ದಿದ್ದವು. ನಂತರ ಆರೋಪಿತರು ತಮ್ಮ ಮನೆ ಕಡೆಗೆ ಹೋಗಿರುತ್ತಾರೆ.

ನಂತರ ಆ್ಯಂಬುಲೆನ್ಸ್ ನ್ನು ಕರೆಸಿ ಪ್ರಾ.ಸಾ-1 ಮತ್ತು ಚಾಸಾ-2 ರವರನ್ನು ಸೊರಬದ ಸರ್ಕಾರಿ ಆಸ್ಪತ್ರೆಗೆ ಚಿಕಿತ್ಸೆಗಾಗಿ ಕರೆದುಕೊಂಡು ಹೋಗಿರುತ್ತೇವೆ. ಸೊರಬ ಆಸ್ಪತ್ರೆಯ ವೈದ್ಯರು ಹೆಚ್ಚಿನ ಚಿಕಿತ್ಸೆಗಾಗಿ ಶಿವಮೊಗ್ಗಕ್ಕೆ ಕರೆದುಕೊಂಡು ಹೋಗಲು ಹೇಳಿದ್ದು ಪ್ರಾಸಾ-1 ಮತ್ತು ಚಾಸಾ-

2 ಶಿವಮೊಗ್ಗದ ಮ್ಯಾಕ್ಸ್ ಅಸ್ಪತ್ರೆಗೆ ಹೆಚ್ಚಿನ ಚಿಕಿತ್ಸೆಗಾಗಿ ದಾಖಲಿಸಿರುತ್ತೇವೆ. ನಂತರ ಉಡುಪಿಯ ಆದರ್ಶ ಆಸ್ಪತ್ರೆಗಾಗಿ ಹೆಚ್ಚಿನ ಚಿಕಿತ್ಸೆಗಾಗಿ ಕರೆದುಕೊಂಡು ಹೋಗಿ ದಾಖಲು ಮಾಡಿರುತ್ತೇವೆ. ನಂತರ ಮನೆಗೆ ಕರೆದುಕೂಂಡು ಬಂದಿದ್ದು ಆ ನಂತರ ಮತ್ತೆ ಚಾಸಾ-2 ರವರು ಕೋಮಾ ಸ್ಥಿತಿಗೆ ಹೋಗಿರುತಾತರೆ. ನಂತರ ಮಂಗಳೂರಿನ ವೆನ್ ಲಾಕ್ ಆಸ್ಪತ್ರೆಗೆ ಚಿಕಿತ್ಸೆಗಾಗಿ ದಾಖಲು ಮಾಡಿರುತ್ತೇವೆ. ಆರೋಪಿತರು ನನ್ನ ಗಂಡ ಚಾಸಾ-2 ರವರಿಗೆ ಜೋರಾಗಿ ತಲೆಗೆ ಹೊಡೆದಿದ್ದರಿಂದ ಅವರಿಗೆ ಮಾತನಾಡಲು ಆಗುವುದಿಲ್ಲ ಮತ್ತು ಬಲಗೈ ಮತ್ತು ಬಲಗಾಲು ಸ್ವಾಧೀನ ಇರುವುದಿಲ್ಲ.

ಪ್ರಾ.ಸಾ-1 ರವರು ಈ ಬಗ್ಗೆ ಪೋಲೀಸರಿಗೆ ದೂರನ್ನು ನೀಡಿರುತ್ತಾರೆ. ಪೋಲೀಸರು ಗಲಾಟೆ ಬಗ್ಗೆ ನನ್ನನ್ನು ವಿಚಾರಣೆ ಮಾಡಿದ್ದಾರೆ , ಈ ಬಗ್ಗೆ ನಾನು ಹೇಳಿಕೆ ನೀಡಿರುತ್ತೇನೆ. ಆರೋಪಿತರು ಪ್ರಾ.ಸಾ-1 ಮತ್ತು ಚಾಸಾ-2 ರವರಿಗೆ ಹಲ್ಲೆ ಮಾಡಲು ಉಪಯೋಗಿಸಿದ್ದ 2 ಕಲ್ಲುಗಳು ಮತ್ತು ಒಂದು ರೀಪೀಸ್ ನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ಅವುಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಈಗಾಗಲೇ ಮು ಮಾ -1 ರಿಂದ ಮು ಮಾ -3 ಎಂದು ಗುರುತಿಸಲಾಗಿದೆ. ಆರೋಪಿತರು ಇಂದು ನ್ಯಾಯಾಲಯದ ಮುಂದೆ ಹಾಜರು ಇದ್ದು ಸಾಕ್ಷಿ ಅವರನ್ನು ನೋಡಿ ಗುರುತಿಸಿರುತ್ತಾರೆ.

(ಈ ಹಂತದಲ್ಲಿ ಆರೋಪಿತರ ಪರ ವಕೀಲರ ಕೋರಿಕೆಯ ಮೇರೆಗೆ ಪಾಟೀಸವಾಲಿಗೆ ಸಮಯ ನೀಡಲಾಯಿತು)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯ ಪ್ರಕಾರ ನನ್ನ ಉಕ್ತಲೇಖನದ ರೀತ್ಯಾ ಗಣಕೀಕರಣಗೊಳಿಸಲಾಯಿತು)

ಓ ಹೇ ಕೇ ಸ ಇದೆ

5 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಶಿವಮೊಗ್ಗ (ಪೀಠಾಸೀನ, ಸಾಗರ).